Linking of Suvarnavati and Chikkahole Projects in Chamarajanagar Taluk.

780. SRI M. C. BASAPPA (Chamarajanagar).—Will the Minister of State for Major and Medium Irrigation be pleased to state.—

(*a*) Whether the Government have received any proposal to link the two projects, *i.e.* Suvarnavati and Chikkahole in Chamarajanagar Taluk through a link canal;

(*b*) if so, when it is likely to be taken up?

SRI B. B. CHIMMANAKATTI.—(Minister of State for Major and Medium Irrigation) —

(*a*) No. Only request for the proposal has been received.

(*b*) The question does not arise in view of reply to question (a) above.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ ನನ ''ಎ'' ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಸದರಿ ಸಲಹೆಯ ಬಗ್ಗೆ ಕೋರಿಕೆ ಮಾತ್ರ ಬಂದಿದೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುತ್ತಾರೆ ನಾನು ಈಗಾಗಲೇ ಕಾಗದವನ್ನೂ ಕೂಡ ಬರೆದಿದ್ದೆ. ಈಗಲಾದರೂ ಅದರ ಇನ್‌ವೆಸ್ಟಿಗೇಷನ್ ಮಾಡಿಸುತ್ತೀರಾ, ಆಥವಾ ಸಲಹೆಯಾಗಿ ತೆಗೆದುಕೊಳ್ಳುತ್ತಿರಾ ತಿಳಿಸಬೇಕು. ಈಗ ಸರ್ಕಾರಕ್ಕೆ ಪತ್ರ ಬಂದ ತಕ್ಷಣವೇ ಪ್ರತಿಯೊಂದನ್ನು ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಚೀಫ್ ಇಂಜಿನಿಯರ್ ರವರಿಗೆ ತಿಳಿಸಿದ್ದೀರಾ? ಇದನ್ನು ಒಂದು ಸಲಹೆ ಎಂದು ತಿಳಿದುಕೊಂಡು, ಸಲಹೆಯೇ ಬಂದಿಲ್ಲವೆಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದರೆ ಅದು ತಪ್ಪಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಪೂರ್ತಿಯಾಗಿ ಆಗಿಲ್ಲ. ಬಹುಶಃ ಇದು ಇನ್ನು ಒಂದು ತಿಂಗಳ ಕಾಲದಲ್ಲಿಯೇ ಮುಗಿಯಬಹುದು. ಪ್ರೆಲಿಮಿನರಿ ಇನ್‌ವೆಸ್ಟಿಗೇಷನ್ ಮುಗಿದ ತಕ್ಷಣವೇ ರಿಪೋರ್ಟ್‌ನ್ನು ತರಿಸಿಕೊಂಡು ನಿರ್ದಿಷ್ಟವಾದ ಉತ್ತರವನ್ನು ಹೇಳುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ನಾನು ಬರೆದಿರತಕ್ಕಂಥ ಲೆಟರ್‌ನಲ್ಲಿ ಎರಡು ರಿವರ್ ವ್ಯಾಲಿ ಇರುತ್ತದೆ ಇದರಲ್ಲಿ ಒಂದರಲ್ಲಿ ಸರ್ಪಲಸ್ ಇರುತ್ತದೆ ಮತ್ತೊಂದರಲ್ಲಿ ಡಿಫಿಸಿಟ್ ಇರುತ್ತದೆ. ಎರಡನ್ನೂ ಲಿಂಕ್ ಮಾಡಲು ಸಲಹೆಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಪ್ರಿಲಿಮಿನರಿ ರಿಪೋರ್ಟ್ ತಮ್ಮ ಮುಂದೆ ಇದಿಯೇ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಪ್ರಿಲಿಮಿನರಿ ರಿಪೋರ್ಟ್ ಬಂದಿಲ್ಲ. ಕೊಟ್ಟಿರತಕ್ಕಂಥ ಇರಿಗೇಷನ್ ಟ್ಯಾಂಕ್‌ಗಳಲ್ಲಿ ಒಂದು ನೀರು ಇರತಕ್ಕಂಥ ಟ್ಯಾಂಕ್‌ನಿಂದ ಇನ್ನೊಂದು ನೀರಿಲ್ಲದ ಟ್ಯಾಂಕ್‌ಗೆ ಕ್ಯಾನಲ್ ಮುಖಾಂತರ ನೀರನ್ನು ಹಾಯಿಸಿ ಅಚ್ಚುಕಟ್ಟು ಮಾಡುತ್ತೇವೆಂದು ರಿಪೋರ್ಟ್ ಕೊಟ್ಟಿದ್ದಾರೆ. ಆದ್ದರಿಂದ ಪ್ರಿಲಿಮಿನರಿ ರಿಪೋರ್ಟ್ ಏನು ಇರುತ್ತದೆ ಅದನ್ನು ತರಿಸಿ ನೋಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಫಿಜಿಬಲಿಟಿ ರಿಪೋರ್ಟ್ ತರಿಸುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಫೇಸಿಬಲಿಟಿ ಇದ್ದರೆ ಈ ವರ್ಷದ ಕಾರ್ಯಕ್ರಮದಲ್ಲಿ ವರದಿಯನ್ನು ತರಿಸಿ ಸೇರಿಸುವುದಕ್ಕೆ ಆಶ್ವಾಸನೆಯನ್ನು ಕೊಡುತ್ತೀರಾ?.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಎಕನಾಮಿಕಲ್ ಫೀಸಿಬಲಿಟಿ ಮತ್ತು ಟೆಕ್ನಿಕಲ್ ಫೀಸಿಬಲಿಟಿ ಇದ್ದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಪ್ರಿಲಿಮಿನರಿ ರಿಪೋರ್ಟ್ ಬಂದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

Opening of Primary and High Schools, during the next academic year.

805. SRI G. RAJU GOWDA (Hanur).—Will the Minister of State for Primary and Secondary Education be pleased to state :—

(*a*) the number of new Primary Schools and High Schools that the Government proposed to open during the next academic year ;

(*b*) the number of average students having a teacher in Primary Schools in the State;

(*c*) whether it has come to the notice of the Government tha the Children are facing difficulties in their education due to conduc-t ting of 3-4 classes at a time in a single room ?

SMT. NAGAMMA C. KESHAVA MURTHY.—(Minister of State for Primary and Secondary Education)

(*a*) Not yet decided.

(*b*) There is one Teacher for every 46 Students (Average).

(*c*) Yes.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ ೩೦೦ ಜನಸಂಖ್ಯೆ ಮೇಲ್ಪಟ್ಟಿರತಕ್ಕಂಥ ಪ್ರತಿಯೊಂದು ಗ್ರಾಮಕ್ಕೂ ಒಂದು ಪಾಠಶಾಲೆಯನ್ನು ಮಂಜೂರು ಮಾಡಬೇಕೆಂದು ಸರ್ಕಾರದ ನೀತಿ ಇರುವುದರಿಂದ ಈ ನೀತಿಯನ್ನು ಪೂರ್ಣ ಜಾರಿಗೊಳಿಸುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗಾಗಲೇ ಎಲ್ಲ ಶಾಲೆಗಳಿಗೂ ಟೀಚರ್ಸ್ ಡೆಪ್ಯೂಟಿ ಮಾಡುವುದಕ್ಕೆ ಸಮಸ್ತ ಪ್ರಯತ್ನವನ್ನು ಮಾಡಲಾಗಿದೆ. ಮತ್ತು ರೆಗ್ಯುಲರ್ ಆಗಿ ಉಪಾಧ್ಯಾಯರನ್ನೂ ಅಪಾಯಿಂಟ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಜಿ. ರಾಜುಗೌಡ.—ನನ್ನ ಪ್ರಶ್ನೆ ಮುನ್ನೂರು ಜನಸಂಖ್ಯೆ ಇರತಕ್ಕಂಥ ಪ್ರತಿಯೊಂದು ಗ್ರಾಮಕ್ಕೂ ಸ್ಕೂಲನ್ನು ಮಂಜೂರು ಮಾಡಬೇಕೆಂಬ ನೀತಿ ಸರ್ಕಾರದ್ದು ಇರುತ್ತದೆ ಆದ್ದರಿಂದ ಬಹುಶಃ ಎಷ್ಟು ಕಡೆ ಶಾಲೆಗಳನ್ನು ತೆಗೆಯಬೇಕೆಂದು ಇರುತ್ತೀರಿ ಅದನ್ನು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—೨೪ ಹಳ್ಳಿಗಳಲ್ಲಿ ಮುನ್ನೂರು ಜನಸಂಖ್ಯೆಗೆ ಮೇಲ್ಪಟ್ಟಿರುತ್ತಾರೆ. ಈ ಹಳ್ಳಿಗಳಲ್ಲಿ ಶಾಲೆಗಳನ್ನು ತೆಗೆಯಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ ರಾಜುಗೌಡ.—ಶಾಲೆಗಳಲ್ಲಿ ಶಿಕ್ಷಕರು ಇಲ್ಲದೆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿರುತ್ತದೆ. ಉಪಾಧ್ಯಾಯರು ಇರುವ ಕಡೆ ಒಬ್ಬ ಉಪಾಧ್ಯಾಯರಿಗೆ ೬೦ಜನ ವಿದ್ಯಾರ್ಥಿಗಳಮೇಲ್ಪಟ್ಟು ಇರುತ್ತಾರೆ. ಇದರಿಂದ ಉಪಾಧ್ಯಾಯರಿಗೂ ತೊಂದರೆ ಇರುತ್ತದೆ. ಆದ್ದರಿಂದ ಕೊರತೆಯನ್ನು ನಿವಾರಣೆಮಾಡಲು ತಕ್ಷಣ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ.—ಉಪಾಧ್ಯಾಯರ ಕೊರತೆ ಒಂದೇ ಕಡೆ ಮಾತ್ರವಿಲ್ಲ ಇಡಿ ರಾಜ್ಯದಲ್ಲಿಯೇ ಉಪಾಧ್ಯಾಯರ ಕೊರತೆ ಇರುತ್ತದೆ ಉಪಾಧ್ಯಾಯರು ಜಾಸ್ತಿ ಬೇಕಾಗಿರುತ್ತದೆ. ನಾವು ತಕ್ಷಣ ಉಪಾಧ್ಯಾಯರನ್ನು ತೆಗೆದುಕೊಳ್ಳಬೇಕಾದರೆ ಪ್ಯೂಪಿಲ್ಸ್ ರೇಷಿಯೋವನ್ನು ತೆಗೆದುಕೊಳ್ಳಬೇಕಾಗುತ್ತದೆ. ಸುಮಾರು ನಾಲ್ಕು ಸಾವಿರ ಟೀಚರ್ಸ್ ನಮಗೆ ಬೇಕಾಗುತ್ತದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ನಮಗೆ ಬೇಕಾದರೂ ನಾವು ಹಿಂದಿನ ವರ್ಷದಲ್ಲಿ ಕೇವಲ ಮುನ್ನೂರಕ್ಕೆ ಹೆಚ್ಚಿಗೆ ಪೋಸ್ಟ್‌ಗಳನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಈ ವರ್ಷದಲ್ಲಿ ಆದಷ್ಟು ಜಾಗ್ರತೆಯಾಗಿ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿ ಉಪಾಧ್ಯಾಯರುಗಳನ್ನು ಶಾಲೆಗಳಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಿ. ಬಿ. ಭಾವಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತ ಸರಾಸರಿ ನಾಲ್ಕು ಸಾವಿರ ಉಪಾಧ್ಯಾಯರು ಪ್ರಸ್ತುತ ಬೇಕಾಗಿರುತ್ತದೆಂದು ಹೇಳಿರುತ್ತಾರೆ. ಇದಕ್ಕೂ ಮೊದಲೇ ಪ್ರಾರಂಭವಾದ ಪ್ರಾಥಮಿಕ ಶಾಲೆಗಳಲ್ಲೂ ಶಿಕ್ಷಕರ ಕೊರತೆ ಇರುತ್ತದೆ. ಶಿಕ್ಷಕರ ಕೊರತೆಯನ್ನು ತುಂಬಲು ನೇಮಕಾತಿಯನ್ನು ಜಾಗ್ರತೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಅಂಥ ಶಾಲೆಗಳನ್ನೂ ಸೇರಿಸಿ ೬ ಸಾವಿರ ಶಿಕ್ಷಕರನ್ನು ನಾವು ಈ ವರ್ಷ ತುಂಬಿರುತ್ತೇವೆ. ಇನ್ನು ಹೆಚ್ಚಿನ ಕಡೆಗಳಲ್ಲಿ ಟೀಚರ್ಸ್‌ಗಳನ್ನು ಪೋಸ್ಟಿಂಗ್ ಮಾಡಿದ್ದರೂ ರಿಪೋರ್ಟ್ ಮಾಡಿಕೊಳ್ಳದೆ ಇರುವುದು, ಮತ್ತು ವಾಲೆಂಟರಿ ರಿಟೈರ್‌ಮೆಂಟ್ ತೆಗೆದುಕೊಂಡಿರುವುದು, ಇಂಥ ಕಾರಣಗಳಿಂದ ವೇಕ್‌ಸ್ಸೀಸ್‌ಗಳು ಇರುತ್ತವೆ. ಆದೆಲ್ಲದಕ್ಕೂ ಇನ್ನೂ ಹೆಚ್ಚಿನ ಉಪಾಧ್ಯಾಯರ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿ ತುಂಬಲು ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎ. ಮೊಹಿಯದ್ದೀನ್.—ಸರಾಸರಿ ೪೬ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರು ಇರುತ್ತಾರೆಂದು ಹೇಳಿರುತ್ತೀರಿ. ಪಟ್ಟಣ ಪ್ರದೇಶಗಳಲ್ಲಿ ಇರಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ೧೫೦ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರು ಇರುತ್ತಾರೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಿಗೂ ಪಟ್ಟಣ ಪ್ರದೇಶಗಳಿಗೂ ಇರತಕ್ಕಂಥ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ೧೦೦ಕ್ಕೆ ೫೦ ಭಾಗದಷ್ಟು ಶಾಲೆಗಳಲ್ಲಿ ಏಕ ಉಪಾಧ್ಯಾಯರು ಇರುತ್ತಾರೆಂದು ಕಂಡು ಬಂದಿರುತ್ತದೆ. ಇದರಿಂದ ನಿಜವಾಗಿಯೂ ತೊಂದರೆಯಾಗಿರುತ್ತದೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಆದಷ್ಟು ಜಾಗ್ರತೆ ಏಕ ಉಪಾಧ್ಯಾಯರು ಇರುವ ಶಾಲೆಗಳಿಗೆ ಮತ್ತೊಬ್ಬ ಉಪಾಧ್ಯಾಯರನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ. ಚೌಡಯ್ಯ.—ಈಗ ನಮ್ಮ ಜಿಲ್ಲೆಯಲ್ಲೂ ಕೂಡ ಸುಮಾರು ೭ನೇ ತರಗತಿಯವರೆಗೂ ಪಾಠವನ್ನು ಮಾಡಲು ಇಬ್ಬರು ಉಪಾಧ್ಯಾಯರು ಇರುತ್ತಾರೆ. ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಗಮನಕ್ಕೆ ತಂದಿದ್ದರೂ ಕೂಡ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಹೆಚ್ಚಿಗೆ ಉಪಾಧ್ಯಾಯರನ್ನು ನೇಮಕ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗಾಗಲೇ ಹೇಳಿದಹಾಗೆ ಉಪಾಧ್ಯಾಯರ ಕೊರತೆ ಎಲ್ಲೆಲ್ಲಿ ಇರುತ್ತದೆ ಅಲ್ಲಿಗೆ ಹೊಸ ಉಪಾಧ್ಯಾಯರನ್ನು ತೆಗೆದುಕೊಂಡಾಗ ಕೊಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ. ಚೌಡಯ್ಯ.—ಪೋಸ್ಟ್‌ಗಳೇ ಸ್ಯಾಂಕ್ಷನ್ ಆಗಿಲ್ಲ. ಸರ್ಕಾರದ ಇವರ ಬಗ್ಗೆ ಆಲೋಚನೆ ಮಾಡಬೇಕು. ೪೬ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರೆಂದು ಹೇಳುತ್ತೀರಿ. ಆದರೆ ೭೦ ವಿದ್ಯಾರ್ಥಿಗಳಿದ್ದರೂ ಒಬ್ಬ ಉಪಾಧ್ಯಾರಯರು ಪಾಠವನ್ನು ಮಾಡುತ್ತಿರುತ್ತಾರೆ. ಆದ್ದರಿಂದ ಇಂಥ ಪರಿಸ್ಥಿತಿ ಇರುವ ಕಡೆ ಸರ್ಕಾರದವರು ಅವಶ್ಯಕತೆಯನ್ನು ಅನುಸರಿಸಿ ಸೂಕ್ತ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ.—ನಾಲ್ಕು ಸಾವಿರ ಹುದ್ದೆಗಳನ್ನು ಪ್ಯುಪಿಲ್ಸ್ ರೇಷಿಯೋ ಪ್ರಕಾರ ಈ ವರ್ಷದಲ್ಲಿ ಕ್ರಿಯೇಟ್ ಮಾಡುವುದು ಇರುತ್ತದೆ. ಖಂಡಿತವಾಗಿಯೂ ಎಲ್ಲ ಶಾಲೆಗಳಿಗೂ ಉಪಾಧ್ಯಾಯರ ಸಂಖ್ಯೆಯನ್ನು ಜಾಸ್ತಿ ಮಾಡುತ್ತೇನೆ.

ಶ್ರೀ ಯು. ಟಿ. ಫರೀದ್.—ಈಗ ಒಂದು ಕ್ಲಾಸ್‌ನಲ್ಲಿ ೬೦ ಮಂದಿ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರನ್ನು ಕೊಟ್ಟಿರುತ್ತೀರಿ. ಒಂದು ಶಾಲೆಯಲ್ಲಿ ೩೦ ವಂದಿಗಿಂತಲೂ ಜಾಸ್ತಿ ವಿದ್ಯಾರ್ಥಿಗಳು ಇರಬಾರದೆಂದು ಇರುತ್ತದೆ. ಕೇರಳ, ಮದ್ರಾಸ್‌ನಲ್ಲಿ ೨೫–೩೦ ಮಂದಿ ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರು ಇರುತ್ತಾರೆ. ೬೦ ಮಂದಿ ಇದ್ದರೆ ಮೂರು ಜನ ಉಪಾಧ್ಯಾಯರನ್ನು ನೇಮಿಸುತ್ತಾರೆ. ಆದ್ದರಿಂದ ದಯವಿಟ್ಟು ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—೬೦ ಮಂದಿ ವಿದ್ಯಾರ್ಥಿಗಳಿಗೆ ಮೇಲ್ಪಟ್ಟಿದ್ದರೆ ತೊಂದರೆಯಾಗುತ್ತದೆ ಎನ್ನುವ ವಿಷಯವನ್ನು ಗಮನಿಸಿ ಅದನ್ನು ಸಹ ಕಡಿಮೆ ಮಾಡಿದ್ದೇವೆ. ಅಂದರೆ ೫೫ಕ್ಕೆ ಇಳಿಸಿದ್ದೇವೆ.

ಶ್ರೀ ಬಿ. ಎನ್. ಕೆಂಗೇಗೌಡ.—ಅಧ್ಯಕ್ಷರೇ, 'ಇ' ಪ್ರಶ್ನೆಗೆ ೩–೪ನೇ ತರಗಳಿಗಳು ಏಕಕಾಲದಲ್ಲಿ ಒಂದೇ ಕೊಠಡಿಯಲ್ಲಿ ನಡೆಯುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಉತ್ತರವಾಗಿ ಬಂದಿದೆ ಎಂದು ಹೇಳಿದ್ದೀರಿ. ರಾಜ್ಯದಲ್ಲಿ ಈರೀತಿ ತೊಂದರೆಗೆ ಒಳಗಾದ ಶಾಲೆಗಳು ಎಷ್ಟಿವೆ ಎನ್ನುವುದನ್ನು ಹೇಳುತ್ತೀರಾ ಮತ್ತು ತೊಂದರೆಯನ್ನು ನಿವಾರಣೆ ಮಾಡಲು ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿರುತ್ತಾರೆನ್ನುವುದನ್ನು ತಿಳಿಸುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ನಾವು ಹಳ್ಳಿಗಳಿಗೆ ಹೋದರೆ ಒಂದೇ ತರಗತಿಯಲ್ಲಿ ೨–೩ ತರಗತಿಗಳು ನಡೆಯುತ್ತಿರುವುದನ್ನು ನೋಡಿದ್ದೇವೆ. ಇದು ಒಂದು ಬಹಳ ದೊಡ್ಡ ಪ್ರಶ್ನೆಯಾಗಿರುತ್ತದೆ. ಹಣದ ಒಂದು ಸವಲತ್ತನ್ನು ನೋಡಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಿಂದಿನ ವರ್ಷ ೨,೫೨೫ ಕಟ್ಟಡಗಳನ್ನು ಕಟ್ಟಲು ತೆಗೆದುಕೊಂಡಿದ್ದೆವು. ಈ ವರ್ಷದಲ್ಲಿ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಡಗಳನ್ನು ಕಟ್ಟಲು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಗಂಗಣ್ಣ.—ಒಂದು ಪ್ರಾಥಮಿಕ ಶಾಲೆಯನ್ನು ಪ್ರಾರಂಭ ಮಾಡಬೇಕಾದರೆ ಕನಿಷ್ಟ ೩೦೦ ಜನಸಂಖ್ಯೆ ಇರಬೇಕೆಂದು ಹೇಳಿರುವುದರಿಂದ, ಕುಟುಂಬ ಯೋಜನೆಯ ಕಾರ್ಯಕ್ರಮವನ್ನು ನಾವು ಕೈಬಿಡಬೇಕಾದ ಪರಿಸ್ಥಿತಿ ಬಂದಿದೆ. ಜನಸಂಖ್ಯೆ ಆಧಾರವನ್ನು ಗಣನೆಗೆ ತೆಗೆದುಕೊಳ್ಳದೆ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಕೇಳುತ್ತೇನೆ? ಈ ಒಂದು ಕ್ರಮವನ್ನು ಇವತ್ತಿನಿಂದಲೇ ಅಳವಡಿಸಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಗಮನದಲ್ಲಿಟ್ಟುಕೊಂಡು, ಮುಂದೆ ೫,೦೨೫ ಹಳ್ಳಿಗಳಿಗೂ ಕೂಡ ಶಾಲೆಗಳನ್ನು ಮಂಜೂರು ಮಾಡಲು ಹಣ ಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಶಿವಪ್ಪ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ೪ ಸಾವಿರ ಹುದ್ದೆಗಳನ್ನು ಇದುವರೆಗೆ ಭರ್ತಿ ಮಾಡಿಲ್ಲವೆಂದು ಹೇಳಿದ್ದಾರೆ. ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಎಷ್ಟು ವರ್ಷ ಬೇಕು ? ಭರ್ತಿ ಮಾಡುವುದಕ್ಕೆ ಏನಾದರೂ ತಾಂತ್ರಿಕ ತೊಂದರೆ ಇದೆಯೇ ? ಏನು ಅಡ್ಡಿ ಆತಂಕಗಳಿವೆ ಎಂಬುದನ್ನು ಸಭೆಗೆ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಆ ವಿಷಯವನ್ನು ನಾನು ಹೇಳಿಲ್ಲ.

ಶ್ರೀ ಜಿ. ರಾಜೂಗೌಡ.—ಕಟ್ಟಡಗಳ ತೊಂದರೆಯಿರುವುದರಿಂದ ಏಕಕಾಲದಲ್ಲಿ ಮುರ್ನಾಲ್ಕು ತರಗತಿಗಳನ್ನು ನಡೆಸಬೇಕಾಗಿದೆ ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಮಕ್ಕಳ ಹಿತದೃಷ್ಟಿಯಿಂದ ಬೆಳಿಗ್ಗೆ ಒಂದು ತರಗತಿ, ಸಾಯಂಕಾಲ ಒಂದು ತರಗತಿಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡುತ್ತಿರಾ ?

SMT. NAGAMMA C. KESHAVAMURTHY.—I think, this is a good suggestion. The matter, whether we can run the schooles on shift basis is already under active consideration of the Government.

Sanction of the Fire Station to Mandya City

43 SRI M. S. ATHMANANDA (Mandya).—Will the Chief Minister be pleased to state.—

(a) whether it has come to the notice of the Government that there is necessity of a Fire Station in Mandya City ;

Two

(b) if so, the steps taken by the Government for sanctioning he Fire Service Station ?